# ಅಮೃತತ್ವ

ಸಂಸ್ಕೃತದಲ್ಲಿ ಅಮೃತ ಎಂಬ ಮಾತಿಗೆ ಹಲವು ಅರ್ಥಗಳಿವೆ. ಸಾಮಾನ್ಯವಾಗಿ ಅಮೃತವೆಂದರೆ 'ಹಾಲು' ಎಂದೇ ಅರ್ಥ. 'ಅಮೃತ' ಸಾವಿಲ್ಲದ ಎಂದು ಇನ್ನೊಂದು ಅರ್ಥವೂ ಉಂಟು. 'ಮರಣವಿಲ್ಲದ' ಎಂದಾಗ ಸಾವು ಯಾರಿಗಿಲ್ಲ ಎಂಬ ಅರ್ಥದ ಪದರು ಅಲ್ಲಿ ಮುನ್ನೆಲೆಗೆ ಬರುತ್ತದೆ. 'ದೇಹ'ಕ್ಕೆ ಸಾವುಂಟು. ಆದರೆ, ಈ ಶರೀರವನ್ನು ವ್ಯಾಪಿಸಿರುವ ಎಲ್ಲಾ ಇಂದ್ರಿಯಗಳಿಗೂ ಸಾಕ್ಷಿಯಾಗಿರುವ 'ಚೈತನ್ಯ'ಕ್ಕೆ ಸಾವಿಲ್ಲ ಎಂದೇ ಅರ್ಥ. ಅಮೃತ ಎಂಬ ಮಾತು ಲೋಕವಾರ್ತೆಯಿಂದ ಹಿಡಿದು, ಪರಮಾರ್ಥದ ವಾರ್ತೆಯವರೆಗೂ ಇದು ಬೆಳೆದಿದೆ. ನಮ್ಮ ಬದುಕು 'ಹುಟ್ಟು ಮತ್ತು ಮರಣ'ಗಳ ನಡುವೆ ಇದೆ. ಜೀವನದ ಸಾರ್ಥಕ್ಯವೊ ಸಾಧನೆಯೊ ಮುನ್ನೆಲೆಗೆ ಬರಬೇಕಾದರೆ ಹುಟ್ಟಿನ ಗುಟ್ಟನ್ನು ತಿಳಿಯಬೇಕು. ಅದೇ ರೀತಿ ಸಾವಿನ ಗುಟ್ಟನ್ನೂ ನಾವು ಅರಿಯಬೇಕು. ನಚಿಕೇತ ಯಮನಲ್ಲಿ ಸಾವಿನ ಗುಟ್ಟನ್ನು ಅರಿಯಲು ಯತ್ನಿಸಿದ. ಬೃಹದಾರಣ್ಯಕವು ಹುಟ್ಟಿನ ಗುಟ್ಟನ್ನು ಅನೇಕ ಬಾರಿ ಸಾಂಕೇತಿಕ ನೆಲೆಯಲ್ಲಿಯೂ ಪ್ರತಿಮಾತ್ಮಕವಾಗಿಯೂ ಹೇಳಿದ್ದುಂಟು. ಆದರೆ, ನಮಗೆ ಆ ರಹಸ್ಯದ ದಾರಿಯನ್ನು ತಿಳಿಯಲಾರದೆ ಹೋಗಿದ್ದೇವೆ. ನಾವು ತರ್ಕದ ಮಟ್ಟದಲ್ಲಿ ಮಾತ್ರ ತಿಳಿಯುವ ಯತ್ನವನ್ನು ಮಾಡುತ್ತಿದ್ದೇವೆ.

ಯಾಜ್ಞವಲ್ಕ್ಯ ಮತ್ತು ಮೈತ್ರೇಯಿ ಪತಿ–ಪತ್ನಿಯರು. ಮೈತ್ರೇಯಿ ಪ್ರಮುಖವಾಗಿ ಬ್ರಹ್ಮವಾದಿನಿ. ಒಮ್ಮೆ ಯಾಜ್ಞವಲ್ಕ್ಯನಿಗೆ ಕುಟುಂಬವನ್ನು ತ್ಯಜಿಸಿ ಸನ್ಯಾಸಿ ಆಗಬೇಕೆಂದು ಅನ್ನಿಸುತ್ತದೆ. ಆಗ ಅವನು ತನ್ನ ಹೆಂಡತಿಯರಾದ ಕಾತ್ಯಾಯನಿ ಮತ್ತು ಮೈತ್ರೇಯಿ ಇಬ್ಬರನ್ನು ಕರೆಯುತ್ತಾನೆ. ಅವನು ವಿದ್ವತ್ತಿನ ಬಲದಿಂದ ಗಳಿಸಿದ್ದ, ಸಾಕಷ್ಟು ಸಂಪತ್ತನ್ನು ತನ್ನ ಪತ್ನಿಯರಿಬ್ಬರಿಗೂ ಸಮಾನವಾಗಿ ಹಂಚಬೇಕೆಂದು ಬಯಸುತ್ತಾನೆ. ಆಗ ಮೈತ್ರೇಯಿಯನ್ನು ಕರೆದು 'ಅರೇ ಮೈತ್ರೇಯಿ ಅಹಮಸ್ಮಾತ್ ಸ್ಥಾನಾತ್ ಉದ್ಯಾಸನ್ ಅಸ್ಮಿ; ಹಂತ ತೇನಯಾ ಕಾತ್ಯಾಯನ್ಯಾಂತಂ ಕರವಾಣೀತಿ' ನಾನು ಈ ಗೃಹಸ್ಥಾಶ್ರಮದಿಂದ ಬಿಡುಗಡೆ ಬಯಸುತ್ತಿದ್ದೇನೆ. ನಾನು ಸನ್ಯಾಸಾಶ್ರಮವನ್ನು ಸ್ವೀಕರಿಸುವ ಮೊದಲು ನಿನಗೂ ಕಾತ್ಯಾಯನಿಗೂ ಸಮಾನವಾಗಿ ಆಸ್ತಿಯನ್ನು ಪಾಲು ಮಾಡಿಕೊಟ್ಟು ಹೋಗುತ್ತೇನೆ ಎಂದು ಹೇಳುತ್ತಾನೆ. ಆಗ ಮೈತ್ರೇಯಿ: ಪತಿಯಾದರೊ ಸನ್ಯಾಸ ಸ್ವೀಕರಿಸಿ, ಬ್ರಹ್ಮಚಿಂತನದಿಂದ ಅಮೃತತ್ವ ಪಡೆಯುತ್ತಾನೆ. ಆದರೆ, ತನಗೆ ಮಾತ್ರ ಈ ನಶ್ವರವಾದ ಆಸ್ತಿಯನ್ನು ಕೊಡುವ ಮೂಲಕ ತನ್ನನ್ನು ಸಾಂಸಾರಿಕ ಜೀವನದಲ್ಲಿ ಕೂಡಿಸಬೇಕೆಂದು ಬಯಸುತ್ತಾನಲ್ಲ ಎಂದು ಯೋಚಿಸುತ್ತಾಳೆ. ಆಗ ಅವಳು ಕೇಳುವ ಪ್ರಶ್ನೆ ನಿಜಕ್ಕೂ ಶ್ಲಾಘನೀಯವಾದುದೇ ಸರಿ. ಮೈತ್ರೇಯಿಗೆ ಭೌತಿಕ ಸಂಪತ್ತಿನಲ್ಲಿ ಆಸಕ್ತಿಯಿರಲಿಲ್ಲ. ಅವಳು ಕೇಳುವ ಮಾತಿದು: 'ಇಯಂ ಸರ್ವಾ ಪೃಥಿವೀ ವಿತ್ತೇನ ಪೂರ್ಣಾಸ್ಯಾತ್ ಕಥಂ ತೇನಾಮೃತಾಸ್ಯಾಮಿತಿ' ಸಂಪತ್ತಿನಿಂದ ಕೂಡಿರುವ ಈ ಪೃಥ್ವಿಯು ನನ್ನದಾದರೆ, ನನಗೆ ಅಮೃತತ್ವ ಪ್ರಾಪ್ತವಾಗುವುದೊ? ಎಂದು ಪ್ರಶ್ನಿಸುತ್ತಾಳೆ. ಯಾಜ್ಞವಲ್ಕ್ಯನು ಈ ಮಾತನ್ನು ಕೇಳಿ ಚಣಕಾಲ ಬೆರಗುಪಡುತ್ತಾನೆ. ಆಗ ಅವನು ಮೈತ್ರೇಯಿಯು ಕೇಳಿದ ಪ್ರಶ್ನೆಗೆ ನಕಾರಾತ್ಮಕವಾಗಿ ಉತ್ತರಿಸಬೇಕಾಗುತ್ತದೆ. ಆಗ ಅವಳು 'ಯೇನಾಹಂ ನಾಮೃತಾಸ್ಯಾಂ ಕಿಮಹಂ ತೇನ ಕುರ್ಯಾಮ್' ಯಾವುದರಿಂದ ಅಮೃತತ್ವ ನನಗೆ ಸಿಗುವುದಿಲ್ಲವೊ ಅದನ್ನು ತೆಗೆದುಕೊಂಡು ಏನುಮಾಡಲಿ? ಎಂದು ಮರುಪ್ರಶ್ನೆ ಮಾಡುತ್ತಾಳೆ. ಆಗ ಯಾಜ್ಞವಲ್ಕ್ಯ 'ಯಥೈವೋಪಕರಣತಾಂ ಜೀವಿತಂ ತಥೈವ ತೇ ಜೀವಿತಂ ಸ್ಯಾತ್, ಅಮೃತತ್ವಸ್ಯ ತು ನಾಶಾಸ್ತಿವಿತ್ತನೇತಿ' ಎನ್ನುತ್ತಾನೆ. ಸಂಪತ್ತಿನ ಮೂಲಕ ಅಮೃತತ್ವ ಪಡೆಯಲು ಸಾಧ್ಯವಿಲ್ಲ. ಸಂಪತ್ತಿನಿಂದ ಯಾವ ಬಗೆಯ ಸುಖೋಪಭೋಗಗಳು ಸಿಗುತ್ತವೆಯೋ ಅವು ಮಾತ್ರ ನಿನಗೆ ಸಿಗುತ್ತವೆ. ಸಂಪತ್ತಿಗೂ ಅಮೃತತ್ವಕ್ಕೂ ಯಾವುದೇ ಸಂಬಂಧಗಳಿಲ್ಲ ಎಂದು ಯಾಜ್ಞವಲ್ಕ್ಯ ನಿರ್ಮಮವಾಗಿ ಮೈತ್ರೇಯಿಗೆ ಹೇಳುತ್ತಾನೆ.

ಉಪನಿಷತ್ತಿನ ಕಾಲದಲ್ಲಿ ಭೌತಿಕ ಸಂಪತ್ತು ಮತ್ತು ಪಾರಮಾರ್ಥಿಕ ಅಮೃತತ್ವಗಳ ವಿಚಾರವಾಗಿ ವಾಗ್ವಾದಗಳೊ ಸಂವಾದಗಳೊ ಆಗಾಗ ನಡೆಯುತ್ತಿದ್ದವು. ಎಂಬುದಕ್ಕೆ ಈ ಪ್ರಸಂಗ ಒಂದು ಉದಾಹರಣೆ. ಉಪನಿಷತ್ತಿನ ಇಂಥ ಸಂದರ್ಭಗಳು ನಮಗೆ ನೈಜಸಾಕ್ಷ್ಯವನ್ನು ಒದಗಿಸುತ್ತವೆ. ನಾವು ಈಗ 'ಕೊಳ್ಳುಬಾಕ'ದ ಸೀಮೆಯಲ್ಲಿ ಓಡುತ್ತಿದ್ದೇವೆ. ನಾವು ಇನ್ನೂ ಬೇಕೆಂಬ ಕೊನೆಯಿಲ್ಲದ ಬಯಕೆಯಲ್ಲಿ ಹಪಹಪಿಸುತ್ತಿದ್ದೇವೆ. ಇಂದಿನ ಭ್ರಷ್ಟಾಚಾರದ ಹಿಂದೆ ಗೃಹಸ್ಥರ ಆಸೆಬುರುಕುತನವೂ ಉಂಟು. ಮನೆ ಯಜಮಾನನಾದರೊ ಪತ್ನಿ ಹಾಗೂ ಮಕ್ಕಳ ಕಪಿಮುಷ್ಟಿಯಲ್ಲಿ ಸಿಕ್ಕಿದ್ದಾನೆ. ಅವರು ಹಾಕಿದ ತಾಳಕ್ಕೆ ಕುಣಿಯಬೇಕಾದ ಸಂದರ್ಭಗಳೇ ಹೆಚ್ಚಾಗಿವೆ. ಮನೆಯ ಯಜಮಾನಿ ಕೇಡಿನಲಿ ಕೈಯಿಡದೆ ತನ್ನೊಪ್ಪಿನ ಒದಿನಲಿಬದುಕಿದ್ದರೆ ಮನೆಯ ಯಜಮಾನ ಭ್ರಷ್ಟಾಚಾರಕ್ಕೆ ಕೈಯಿಡುತ್ತಿರಲಿಲ್ಲ. ಅವನ ಬದುಕು 'ಅಮೃತತ್ವ'ದ ಸೀಮೆಯಲ್ಲೇ ಉಳಿಯುತ್ತಿತ್ತು. 'ಅತಿಯಾಸೆ ಗತಿಕೇಡು' ಸಂಭವಿಸಲು ಎಂದಿಗೂ ಅವಕಾಶ ಇರುತ್ತಿರಲಿಲ್ಲ! 'ಗೃಹಿಣೀ ಗೃಹಮುಚ್ಯತೇ' ಎಂಬ ಪ್ರಾಚೀನರ ಉಕ್ತಿಮೀಮಾಂಸೆಯಲ್ಲಿ ಏನೆಲ್ಲಾ ಅರ್ಥದ ಪದರುಗಳಿವೆ? ಆದರೆ, ನಾವು ಸಂಪತ್ತಿನ ಗುಲಾಮರಾಗಲು ಬದುಕಿದ್ದೇವೆಯೇ ಹೊರತು; ಅಮೃತತ್ವದ ಉಪಾಸಕರಾಗಲು ಸಾಧ್ಯವಾಗುತ್ತಿಲ್ಲ. ಮೈತ್ರೇಯಿ– ಕಾತ್ಯಾಯಿನಿಯರು ಕೇವಲ ಭೌತಿಕ ಸಂಪತ್ತನ್ನು ಮಾತ್ರ ಬಯಸಲಿಲ್ಲ. ಅವರು ಅದಕ್ಕಿಂತ ಮೀರಿದ ಅಮೃತತ್ವದ ಸಂಪತ್ತನ್ನು ಬಯಸಿದರು. ಅವರು ಸತ್ಯಾನ್ವೇಷಣವನ್ನೇ ಬಯಸಿದರು. ಇದು ಸಾಮಾನ್ಯವಾಗಿ ಲೋಕದ ಬಹಿರ್ವ್ಯಾಪಾರಕ್ಕೆ ವಿರುದ್ಧವಾದುದು. ಇಂಥ ಪತ್ನಿಯರನ್ನು ಪಡೆದ ಪತಿ ನಿಜಕ್ಕೂ ಭಾಗ್ಯಶಾಲಿ! ನಾವು ಏನೇನಲ್ಲ ಬಯಸಿ ಹಪಹಪಿಸುತ್ತೇವೆ. ನಮ್ಮೊಳಗಿನ ಆನಂದವನ್ನು ನಾವು ತಿಳಿಯಲು ಅಶಕ್ತರಾಗಿದ್ದೇವೆ. ಇಂಥ ಆನಂದವನ್ನು ಇತ್ತ ಗಂಡನೂ ಅರಿಯಬೇಕು; ಅತ್ತ ಹೆಂಡತಿಯೂ ತಿಳಿಯಬೇಕು. ಇಂಥ ವಿವೇಕದಲ್ಲಿ 'ಅಮೃತತ್ವ'ವು ಪ್ರಾಪ್ತವಾಗುತ್ತದೆ! 'ಅಮೃತತ್ವ' ಎಂಬ ಮಾತಿನ ಅರ್ಥವ್ಯಾಪಾರ ಜೀವನ ದೃಷ್ಟಿಯ ಮೂಲಕ ವಿಶಾಲವಾಗುತ್ತ ಹೋಗುತ್ತದೆ. ಆದರೆ, ಇದನ್ನು ತಿಳಿದು ತಿಳಿಯಾಗುವವರು ಯಾರಿದ್ದಾರೆ?

■ **ಪುರಂಜೀವಿ**

## ಮಾತೇ ಮುತ್ತು

- ನಿಮ್ಮ ಸೌಂದರ್ಯ ಅಳಿಯಬಹುದು, ಆದರೆ ನಿಮ್ಮ ಸನ್ನಡತೆ ನಾಶವಾಗದೆ ಅಂದವನ್ನು ಹೆಚ್ಚಿಸುತ್ತದೆ.
  —ಓವಿಡ್
- ವ್ಯಕ್ತಿಯಂತೆಯೇ ಬದುಕು ಹಲವಾರು ವಿರೋಧಗಳಿಂದಲೂ ಘರ್ಷಣೆಗಳಿಂದಲೂ ಮೇಳಗಳಿಂದಲೂ ಕೂಡಿದೆ.
  —ಪಿ. ಲಂಕೇಶ್
- ಆಸೆ ಎಂಬುದು ವಿಷದ ಆಹಾರವಿದ್ದಂತೆ.
  —ಬುದ್ಧ
- ಅಧಿಕಾರದ ಆಸೆಗೆ ಹೋರಾಡುವವರು ಸರ್ಕಾರವನ್ನು ಅಪವಿತ್ರಗೊಳಿಸಿ ಅದನ್ನು ಅನೀತಿಗೆ ಎಳೆದು ತರುತ್ತಾರೆ. ಅವರು, ವೃತ್ತಿ ಯಾವುದನ್ನೂ ಮಾಡದೇ ಬದುಕುವ ಹಾದಿಯನ್ನು ಹುಡುಕಿಕೊಂಡಿರುತ್ತಾರೆ.
  —ಅಬ್ರಹಾಂ ಲಿಂಕನ್
- ಹಿಂದಿನ ಅನುಭವವು ದಾರಿಯಾಗಬೇಕೇ ವಿನಃ ಹುಗಿದ ಗೂಟವಾಗಬಾರದು.
  —ವಿಲಿಯಮ್ಸ್
- ಅಧಿಕಾರ ಎಂದರೆ ಮುಟ್ಟಿದ್ದನ್ನೆಲ್ಲಾ ಕಲುಷಿತಗೊಳಿಸುವುದು.
  —ಪಿ.ಬಿ. ಷೆಲ್ಲಿ
- ಅಧಿಕಾರ ಸ್ಥಾನವು ದೋಷ ಇಲ್ಲದವನಲ್ಲೂ ಸಂಶಯಪಡುವಂತದ್ದು.
  —ಕೆಂಪು ನಾರಾಯಣ
- ಜನಾಭಿಪ್ರಾಯವನ್ನು ಧಿಕ್ಕರಿಸುವ ಸರ್ಕಾರವನ್ನು ಜನರೂ ಧಿಕ್ಕರಿಸುತ್ತಾರೆ.
  —ಮಹಾತ್ಮ ಗಾಂಧಿ